





ಲಕ್ಷ್ಮಿ ಸುನಂದ್



ಜೋಸೆಫ್



ಟಿಬಿ ಮನು



ದಿವ್ಯಾ ಪಚ್ಚಿಪುಲುಸು



ಸಿಂಧು ರಾಣಿ



ಸ್ನೇಹಾ ಮುರಳೀಧರ್



ಸುಗಂತಿ ವಿ. ಪ್ರಭಾಗರನ್



ಪ್ರಿಯಜಾ ಮನ್ನತ್



ಸೀಮಾ ವಿ.ಸಿ.

ಸ್ನೇಹಾ ಮುರಳೀಧರ್ ಚಾರ್ಟರ್ಡ್ ಅಕೌಂಟೆಂಟ್. ಡ್ರಾಯಿಂಗ್–ಪೇಂಟಿಂಗ್ ಹವ್ಯಾಸ ಹೊಂದಿರುವ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಲಾಕೃತಿ ಚಿತ್ರಿಸಿದ್ದಾರೆ. ದಿವ್ಯಾ ಪಚ್ಚಿಪುಲುಸು ಗಾಯಕಿ ಹಾಗೂ ಚಿತ್ರಕಲಾ ಕಲಾವಿದೆ. ಜಲವರ್ಣದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರು ಕರ್ನಾಟಕ ಸಂಗೀತ ಪಿತಾಮಹ ಪುರಂದರ ದಾಸರ ಚಿತ್ರವನ್ನು ಮೂಡಿಸಿದ್ದಾರೆ.

ಸಿಂಧು ರಾಣಿ ಫಾರ್ಮಸಿ ಓದಿ, ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾರೆ. ಕನ್ನಡ ಸಿನಿಮಾ ಜಗತ್ತಿನ ಮೇರು ನಟ ರಾಜಕುಮಾರ್ ಅವರನ್ನು ತಮ್ಮ ಕಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಸುಗಂತಿ ವಿ. ಪ್ರಭಾಗರನ್ ವೃತ್ತಿಯಿಂದ ಎಂಜಿನಿಯರ್. ಹವ್ಯಾಸದಿಂದ ಚಿತ್ರಕಾರರು. ಅವರು ಚಿತ್ರಕಲೆಯ ದಂತಕಥೆ ಎಂದೇ ಖ್ಯಾತರಾದ ಸಾಂಬಾನಂದ್ ಮೋನಪ್ಪ ಪಂಡಿತ್ (ಎಸ್.ಎಂ. ಪಂಡಿತ್) ಅವರನ್ನು ಕುಂಚದಲ್ಲಿ ಮೂಡಿಸಿದ್ದಾರೆ.

ಪ್ರಿಯಜಾ ಮನ್ನತ್ ಸಿವಿಲ್ ಎಂಜಿನಿಯರ್. ಅವರು ದೇಶದ ಅತ್ಯುತ್ತಮ ವಾಸ್ತುಶಿಲ್ಪಿಗಳಲ್ಲೊಬ್ಬರಾದ ಸರ್. ಎಂ. ವಿಶ್ವೇಶ್ವರಯ್ಯ ಅವರನ್ನು ಬಣ್ಣದಲ್ಲಿ ಜೀವಂತಗೊಳಿಸಿದ್ದಾರೆ. ಟಿಬಿ ಮನು ಅರ್ಥಶಾಸ್ತ್ರದಲ್ಲಿ ಎಂಎ ಓದಿ, ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದರು. ಅವರು ಮೈಸೂರಿನ ಸುಪ್ರಸಿದ್ಧ ನೃತ್ಯ ಕಲಾವಿದೆ ಕೆ. ವೆಂಕಟಲಕ್ಷ್ಮಮ್ಮ ಅವರ ಕಲಾಕೃತಿ ಬಿಡಿಸಿದ್ದಾರೆ.

ವಿಭಿನ್ನ ಹಿನ್ನೆಲೆಯ ಕಲಾವಿದೆಯರು ಕರ್ನಾಟಕದ ಸಾಂಸ್ಕೃತಿಕ ಹಿರಿಮೆಯನ್ನು 'ವ್ಯಕ್ತಿತ್ವ'ಗಳ ಮೂಲಕ ಕಟ್ಟಿಕೊಡುತ್ತಿದ್ದಾರೆ. ಈ ಸೃಜನಶೀಲ ಅಭಿವ್ಯಕ್ತಿ, ಕಲೆಯ ಸಾಂಸ್ಕೃತಿಕ ಹಿರಿಮೆಯ ನಿದರ್ಶನದ ಕಾರಣವಾಗಿ ಮುಖ್ಯವಾಗುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**